ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 10-01-2024 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ವೈ ಎಸ್ ನ್ಯಾಯವಾದಿರವರಿಂದಃ

ನಮ್ಮ ಮತ್ತು ವಾದಿಯರ ನಡುವಿನ ಆವರಣ ಗೊಡೆಯ ಉದ್ದ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಆವರಣ ಗೋಡೆಯು ಫೌಂಡೇಶನ್ ನ ಮೇಲೆ 5 ಸಾಲು ಕಲ್ಲು ಗಳಷ್ಟು ಎತ್ತರ ಇರುತ್ತದೆ. ಸದರಿ ಆವರಣ ಗೊಡೆಯು ಚಿರೆಕಲ್ಲಿನಿಂದ ನಿರ್ಮಿಸಿದ್ದು ಎಂದರೆ ಸರಿ. ಸಾಕ್ಷಿಯ ಸ್ವತಃ ನಾವು ಮತ್ತು ವಾದಿಯರು ಸೇರಿಕೊಂಡು ಸದರಿ ಆವರಣ ಗೊಡೆಯನ್ನು ಕಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಈಗ ಆಧರಿಸುವ ಆವರಣ ಗೊಡೆ ಯನ್ನು ನಾನು ಒಬ್ಬನೇ ಕಟ್ಟಿದ್ದರೂ ಸಹಿತಿ ವಾದಿ ಮತ್ತು ನಾನು ಸೇರಿ ಕಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಆವರಣ ಗೊಡೆಗೆ ಸಿಮೆಂಟ್ ಪ್ಲಾಸ್ಟರಿಂಗ್ ಮಾಡಿರುವುದಿಲ್ಲ. ಸದರಿ ಆವರಣ ಗೊಡೆಯನ್ನು ನಿರ್ಮಾಣ ಮಾಡಲು ನನಗೆ ಇಪ್ಪತ್ತೈದು ಸಾವಿರ ರೂ ಖರ್ಚಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ಮತ್ತು ವಾದಿಯರು ಸುಮಾರು ತಲಾ ಎಂಟು ಸಾವಿರಗಳಂತೆ ಖರ್ಚುಮಾಡಿ ನಿರ್ಮಾಣ ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯರು ನಾನು ಹೇಳುವಂತೆ ರೂ.8,000/- ಖರ್ಚು ಮಾಡಿ ಆವರಣ ಗೊಡೆ ನಿರ್ಮಾಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2015 ನೇ ಸಾಲಿನಲ್ಲಿ ದಾವಾಸ್ತಿಗಳಿಗೆ ಉಪನೊಂದಣಾಧಿಕಾರಿಗಳ ಕಚೇರಿಯ ಪ್ರಕಾರ ಮಾರುಕಟ್ಟೆ ಮೌಲ್ಯ ಎಷ್ಟು ಇತ್ತು ಎಂಬುದು ನನಗೆ ಗೊತ್ತಿಲ್ಲ. ವಾದಿಯು ದಾವಾಸ್ತಿಯಲ್ಲಿ 2013 ನೇ ಸಾಲಿನಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಲು ಪ್ರಾರಂಭ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕಟ್ಟಡವನ್ನು ವಾದಿಯು ನಿರ್ಮಾಣ ಮಾಡಿ ಪೂರ್ಣ ಗೊಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಅಕ್ರಮವಾಗಿ ವಾದಿಯು ಸದರಿ ಕಟ್ಟಡವನ್ನು ಪೂರ್ಣಗೊಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯರು ನಗರಸಭೆಯ ಕಟ್ಟಡ ಪರವಾನಿಗೆ ಬೈಲಾ ಮತ್ತು ನಿಯಮಗಳನುಸಾರವಾಗಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ವಾದಿಯು ನಿಯಮಗಳನ್ನು ಉಲ್ಲಂಘನೆ ಮಾಡಿ ಕಟ್ಟಡವನ್ನು ನಿರ್ಮಾಣ ಮಾಡಿದ್ದು, ಈ ಬಗ್ಗೆ ಅದನ್ನು ತೆರವುಗೊಳಿಸುವಂತೆ ಆದೇಶವಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ವಾದಿಯು ದಾವಾಸ್ತಿಯಲ್ಲಿ ಕಟ್ಟಡವನ್ನು ನಗರಸಭೆಯ ನಿಯಮಗಳಿಗನುಸಾವಾಗಿ ಕಾನೂನಿನ ಪ್ರಕಾರ ಸೆಟ್ ಬ್ಯಾಕ್ ನ್ನು ಬಿಟ್ಟು ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದಾಗ ನಾನು ನಗರಸಭೆಗೆ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಈ ಬಗ್ಗೆ ನಗರಸಭೆಯವರು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ನಾವು ದೂರನ್ನು ನೀಡಿದ ಸಮಯದಲ್ಲಿ ವಾದಿಯು ದಾವಾಸ್ತಿಯಲ್ಲಿ ಇಲ್ಲದ ಸಮಯದಲ್ಲಿ ನಗರಸಭೆ ರವರು ದಾವಾಸ್ತಿಗೆ ಬಂದು ಆತನ ಮನೆಯ ಪೂರ್ವ ದಿಕ್ಕಿನ ಸ್ವಲ್ಪಭಾಗವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಗರಸಭೆಯವರು ಕಾನೂನಿನ ಪ್ರಕಾರ ತೆರವುಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಆ ಸಮಯದಲ್ಲಿ ನಗರಸಭೆಯವರು ನಾವು ಕೊಟ್ಟ ಸುಳ್ಳು ದೂರಿನ ಮೇರೆಗೆ ವಾದಿಗೆ ಸೇರಿದ ಎಂಟು ಕಬ್ಬಿಣದ ರಾಡ್ ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಮನೆಯ ಪೂರ್ವ ದಿಕ್ಕಿನಿಂದ ಆತನ ಮನೆಯ ಮೆಲ್ಛಾವಣಿಯ ಮಳೆ ನೀರು ನಮ್ಮ ಜಮೀನಿಗೆ ಬೀಳುತ್ತದೆ ಎಂದು ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ನಗರಸಭೆಯವರು ವಾದಿಗೆ ಅನಾವಶ್ಯಕವಾಗಿ ತೊಂದರೆ ಕೊಟ್ಟಿದ್ದರಿಂದ ಈ ದಾವೆಯನ್ನು ಹಾಕಲು ವಾದಿಗೆ ಕಾರಣ ಉಂಟಾಯಿತು ಎಂದರೆ ಸರಿಯಲ್ಲ. ದಾವಾಸ್ತಿಯ ಉತ್ತರಕ್ಕೆ 12 ಅಡಿ ಅಗಲ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ 12 ಅಡಿ ಅಗಲದ ರಸ್ತೆಯು ಇನ್ನೂ ಸಹ ಮೂಲ ಮಾಲೀಕರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಮೂಲ ಮಾಲೀಕರು ವಾದಿಗೆ ಯಾವುದೇ ರೀತಿಯ ತಕರಾರು ಮಾಡಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯ ವಿರುದ್ಧ ಒರ್ವ ಜಾನ್ ಡಿಸೆಲ್ವಾ ಎನ್ನುವವನು ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿದ ಅಸಲು ದಾವೆ ಸಂಖ್ಯೆ 64/2015 ಈ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಗರಸಭೆಗೆ ವಾದಿಯು ಅನುಮೊದಿತ ನಕ್ಷೆ ಪ್ರಕಾರ ಕಟ್ಟಡ ಕಟ್ಟುತ್ತಿರುವ ಬಗ್ಗೆ ಗೊತ್ತಾದಾಗ ನಮ್ಮ ಚಿತಾವಣೆ ಮೇರೆಗೆ ವಾದಿಯ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಸ್ಥಗಿತಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ವಾದಿಯು ಈ ದಾವೆಯಲ್ಲಿನ 2 ನೇ ಪ್ರತಿವಾದಿಯ ತಮ್ಮ ಮಾಗಣಿಯನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಗರಸಭೆಯವರು ಕಾನೂನು ಬಾಹಿರವಾಗಿ ನಾನು ನಿರ್ಮಾಣ ಮಾಡಿರುವ ಕಟ್ಟಡವನ್ನು ಸಹ ತೆರವುಗೊಳಿಸಿರುತ್ತಾರೆ ಎಂದರೆ ಸರಿ. ನಾನು ವಾದಿ ಮತ್ತು ನಗರಸಭೆ ವಿರುದ್ಧ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿರುತ್ತೇನೆ ಎಂದರೆ ಸರಿ. ನಗರಸಭೆಯವರು ವಾದಿಯು ಅಕ್ರಮವಾಗಿ ಕಟ್ಟುತ್ತಿರುವ ಕಟ್ಟಡವನ್ನು ತೆರವುಗೊಳಿಸಲು ನಗರಸಭೆಗೆ ನಿರ್ದೇಶನ ನೀಡುವಂತೆ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ರಿಟ್ ಅರ್ಜಿಯಲ್ಲಿ ನಗರಸಭೆಯವರು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಗರಸಭೆಯವರು ತಮ್ಮ ತಕರಾರಿನಲ್ಲಿ ವಾದಿಯು ನಿರ್ಮಾಣ ಮಾಡುತ್ತಿರುವ ಕಟ್ಟಡದ ಜಮೀನನ್ನು ಕಂದಾಯ ಇಲಾಖೆ ಮೂಲಕ ಸರ್ವೆ ಮಾಡಿಸಿ, ನಂತರ ಅದು ಸರಿ ಇದೆ ಎಂದು ನಮಗೆ ತಿಳಿದುಬಂದಿರುತ್ತದೆ ಎಂದು ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಕರಾರಿನಲ್ಲಿ ವಾದಿಯು ಅತಿಕ್ರಮಿಸಿದ ಜಾಗವನ್ನು ತೆರವುಗೊಳಿಸಿರುತ್ತೆವೆ



ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ವಾದಿಯು ಬೈಲಾ ಉಲ್ಲಂಘನೆ ಮಾಡಿ ಕಟ್ಟಡವನ್ನು ಪುನಃ ನಿರ್ಮಾಣ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾವು ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯವು ಅತಿಕ್ರಮಣವನ್ನು ತೆರವುಗೊಳಿಸುವಂತೆ ಆದೇಶ ನೀಡಿರುತ್ತದೆ. ಸದರಿ ಆದೇಶದ ಮೇರೆಗೆ ವಾದಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲ್

ಸಲ್ಲಿಸಿರುತ್ತಾರೆ ಎಂದರೆ ಸರಿ. ದಿಃ 04-09-2018 ರ ಆದೇಶದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ನಲ್ಲಿ ರಿಟ್ ಅರ್ಜಿಯ ಮೇಲೆ ಆದ ಆದೇಶವನ್ನು ಕಿತ್ತುಹಾಕಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಸದರಿ ರಿಟ್ ಅಫೀಲ್ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಮಾಡಿರುವುದಿಲ್ಲ ಎಂದರೆ ಸರಿ. ನಾನು ವಾದಿಯ ದಾವಾ ಜಮೀನಿನ 2 ಆಣೆ ಕ್ಷೇತ್ರದ ವಿಸ್ತೀರ್ಣವನ್ನು ಅತಿಕ್ರಮಣ ಮಾಡಿದುದರಿಂದ ಅದನ್ನು ತೆರವುಗೊಳಿಸಲು ವಾದಿಗೆ ಹಸ್ತಾಂತರ ಮಾಡಲು ಬಾಧ್ಯಸ್ಥ ನಿರುತ್ತೆನೆ ಎಂದರೆ ಸರಿಯಲ್ಲ. ವಾದಿಯ ದಾವಾ ಜಮೀನಿನಲ್ಲಿ ನನಗೆ ಯಾವುದೇ ರೀತಿಯ ಹಸ್ತಕ್ಷೇಪ ಮಾಡಲು ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ನಾನು ಹಸ್ತಕ್ಷೇಪ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ವಾದಿಯ ದಾವಾಸ್ತಿಯ 2 ಆಣೆ ವಿಸ್ತೀರ್ಣದ ಜಮೀನನ್ನು ನಾನು ಅತಿಕ್ರಮಣ ಮಾಡಿ ಉಪಭೋಗ ಮಾಡುತ್ತಿದ್ದರೂ ಸಹಿತ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಯು ತನ್ನ ಆಸ್ತಿಯಲ್ಲಿ ಕಟ್ಟಡವನ್ನು ನಿರ್ಮಾಣ ಮಾಡುವಾಗ ನಾನು ಹಸ್ತಕ್ಷೇಪ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹನಿರುತ್ತಾನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**